**ದಿನಾಂಕಃ 04.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಾದ ಶ್ರೀ.VR ರವರಿಂದಃ**

1) ಲಭ್ಯವಿರುವ ಪೋಲಿಸ್ ದಾಖಲೆಗಳ ಆಧಾರದ ಮೇರಗೆ ಮತ್ತು ವೈದ್ಯಕೀಯ ದಾಖಲೆಗಳ ಆಧಾರದ ಮೇರೆಗೆ ನಾನು ಈ ಪ್ರಕರಣದಲ್ಲಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. ನಮ್ಮ ಸಂಸ್ಥೆಯ ಪರವಾಗಿ ಸಲ್ಲಿಸಿರುವಂತಹ ಲಿಖಿತ ಹೇಳಿಕೆಗೆ ನಾನು ಸಹಿ ಮಾಡಿರುವುದಿಲ್ಲ, ಬೇರೆಯ ಕಾನೂನು ಅಧಿಕಾರಿಯು ತಮ್ಮ ಸಹಿಯನ್ನು ಮಾಡಿದ್ದಾರೆ.

2) ಯಾವುದಾದರೂ ವ್ಯಕ್ತಿಯು ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಿದರೆ ಆಗ ನಾವು ಸಾಮಾನ್ಯವಾಗಿ ನಮ್ಮ ಸಂಸ್ಥೆಯಿಂದ ತನಿಖಾಧಿಕಾರಿಯನ್ನು ನೇಮಿಸಿ ಅವರ ಮೂಲಕ ತನಿಖೆಯನ್ನು ಮಾಡಿಸುತ್ತೇವೆ. ಈ ಪ್ರಕರಣದಲ್ಲಿ ನಾವು ನಮ್ಮ ಸಂಸ್ಥೆಯ ಪರವಾಗಿ ತನಿಖೆಯನ್ನು ಮಾಡಿಸಿದ್ದೇವೆ. ಈ ಪ್ರಕರಣದಲ್ಲಿ ಯಾವ ವ್ಯಕ್ತಿಯನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿತ್ತು ಮತ್ತು ಯಾವ ದಿನಾಂಕದಂದು ನೇಮಿಸಲಾಗಿತ್ತು ಎಂದು ಹೇಳಲು ಸಾಧ್ಯವಿಲ್ಲ.

3) ನಮ್ಮ ಸಂಸ್ಥೆಯಿಂದ ನೇಮಕ ಆಗಿದ್ದ ತನಿಖೆಯ ತಂಡದವರು ಕೇವಲ ದಾಖಲೆಗಳನ್ನು ಮಾತ್ರ ಪಡೆದುಕೊಂಡಿದ್ದಾರೆ, ಆದರೆ ಬೇರೆ ಯಾವುದೇ ವ್ಯಕ್ತಿಗಳ ಅಥವಾ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ.

4) ಕೆಎ**-52-**ಎಸ್**-3284** ಸಂಖ್ಯೆಯ ವಾಹನಕ್ಕೆ ನಮ್ಮ ಸಂಸ್ಥೆಯಿಂದ ವಿಮಾ ಪಾಲಿಸಿಯನ್ನು ನೀಡಲಾಗಿತ್ತು ಎಂದರೆ ಸರಿ. ಸದರಿ ವಾಹನಕ್ಕೆ ನೀಡಿರುವಂತಹ ಪಾಲಿಸಿಯು **bundled policy** ಆಗಿದೆ.

5) ಒಂದು ದ್ವಿಚಕ್ರ ವಾಹನದಲ್ಲಿ ಪ್ರಯಾಣ ಮಾಡುವಂತಹ ಹಿಂಬದಿಯ ಸವಾರ **(pillion rider)** ರವರಿಗೆ ಆಗುವಂತಹ ನೋವು ಅಥವಾ ತೊಂದರೆಗಳಿಗೆ ಪರಿಹಾರವನ್ನು ಕೊಡುವಂತಹ ಜವಾಬ್ದಾರಿಯು **bundled policy** ಯ ಒಳಗೆ ಇರುತ್ತದೆ ಎಂದರೆ ಸುಳ್ಳು.

6) **ಪ್ರಶ್ನೆಃ Bundled policy** ಯ ವ್ಯಾಖ್ಯಾನ **(definition)** ಏನು **?**

**ಉತ್ತರಃ Bundled policy** ಅಂದರೆ ಅದನ್ನು **5** ವರ್ಷಗಳ ಅವಧಿಗೆ ನೀಡಲಾಗುತ್ತದೆ ಮತ್ತು ಆ ಪಾಲಿಸಿಯನ್ನು ನೀಡಿದ ದಿನಾಂಕದಿಂದ ಒಂದು ವರ್ಷದಕಾಲ ಆ ಪಾಲಿಸಿಯು **pillion rider** ರವರ **risk** ಅನ್ನು ಒಳಗೊಂಡಿರುತ್ತದೆ ಮತ್ತು ಪ್ರಥಮ ಒಂದು ವರ್ಷದ ಅವಧಿಯಲ್ಲಿ ಆ **Bundled policy** ಯು **Comprehensive** ಪಾಲಿಸಿ ಆಗಿರುತ್ತದೆ ಆದರೆ ಎರಡನೇ ವರ್ಷದ ಪ್ರಥಮ ದಿನದಿಂದ ಆ ಪಾಲಿಸಿಯು ಕೇವಲ **third party** ಪಾಲಿಸಿ ಆಗುತ್ತದೆ.

7) ನಿ.ಆರ್.**6** ಎಂದು ಗುರುತು ಆಗಿರುವ ಪಾಲಿಸಿಯಲ್ಲಿ ನಾನು ಹೇಳಿದಂತಹ ಯಾವುದೇ ನಿಭಂದನೆಯು ಕಂಡು ಬರುವುದಿಲ್ಲ ಎಂದರೆ ಸರಿ. ನಿ.ಆರ್.**6** ಎಂದು ಗುರುತು ಆಗಿರುವ ದಾಖಲೆಯಲ್ಲಿ ನಾವು ಒಟ್ಟು **5,430-00** ರೂಪಾಯಿಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿ. ನಮ್ಮ ಸಂಸ್ಥೆಯವರು ಅಷ್ಟು ಹಣವನ್ನು ಪಡೆದುಕೊಂಡಿರುವ ಕಾರಣದಿಂದ ಆ ದಿಚಕ್ರ ವಾಹನದ ಹಿಂಬದಿಯ ಸವಾರನಿಗೆ ಆಗುವಂತಹ ತೊಂದರೆಗಳಿಗೆ ಹಣ ಕೊಡುವಂತಹ ಜವಾಬ್ದಾರಿಯು ನಮ್ಮ ಸಂಸ್ಥೆಯ ಮೇಲೆ ಇದೆ ಎಂದರೆ ಸುಳ್ಳು.

8) ಮೇಲೆ ಹೇಳಿದಂತಹ ಕೆಎ**-52-**ಎಸ್**-3584** ಸಂಖ್ಯೆಯ ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಿದ್ದಂತಹ ವ್ಯಕ್ತಿಯ ತಪ್ಪಿನಿಂದಲೇ ಅಪಘಾತವು ಆಗಿದೆ ಎಂದರೆ ಸುಳ್ಳು.

9) ಅಪಘಾತಕ್ಕೆ ಸಂಬಂಧಪಟ್ಟ ಹಾಗೆ ಪೋಲಿಸರು ತನಿಖೆಯನ್ನು ಮಾಡಿದ್ದಾರೆ ಮತ್ತು ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ಆ ಅಂತಿಮ ವರದಿಯನ್ನು ತಪ್ಪಾಗಿ ಸಲ್ಲಿಸಿದ್ದಾರೆ.

10) ನಿ.ಪಿ.**1** ದಾಖಲೆಯನ್ನು ನಾನು ನೋಡಿದ್ದೇನೆ. ಯಾವ ಕಾರಣದಿಂದ ದೂರು ಸಲ್ಲಿಸುವಲ್ಲಿ ತಡ ಆಗಿದೆ ಎಂಬ ಬಗ್ಗೆ ನಿ.ಪಿ.**1** ರಲ್ಲಿ ನಮೂದು ಇದೆ ಎಂದರೆ ಸರಿ. ಅಪಘಾತದ ನಂತರ ಅರ್ಜಿದಾರನು ಮಾಗಡಿಯ

ಸರ್ಕಾರಿ ಆಸ್ಪತ್ರೆಗೆ ಹೋಗಿದ್ದಾನೆ ಎಂದು ಕಂಡು ಬರುತ್ತದೆ. ಮಾಗಡಿ ಆಸ್ಪತ್ರೆಯಲ್ಲಿ ಇರುವಂತಹ ಒಳರೋಗಿ ದಾಖಲೆಗಳನ್ನು ನಾನು ನೋಡಿದ್ದೇನೆ. ಮಾಗಡಿ ಆಸ್ಪತ್ರೆಯಲ್ಲಿ ಇರುವ ದಾಖಲೆಗಳ ಪ್ರಕಾರ **Road Traffic Accident** ಎಂದು ಇದೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ **5** ರಲ್ಲಿ **5** ನೇ ಸಾಲಿನಲ್ಲಿ **two wheeler rider hit by four wheeler** ಎಂದು ಬರೆಸಿದ್ದೇನೆ ಎಂದರೆ ಸರಿ.

11) ಯಾವ ಸಂಖ್ಯೆಯ **4** ಚಕ್ರದ ವಾಹನವು ಮೇಲೆ ಹೇಳಿದಂತಹ ದ್ವಿಚಕ್ರ ವಾಹನಕ್ಕೆ ಅಪಘಾತವನ್ನು ಉಂಟು ಮಾಡಿದೆ ಎಂದು ತಿಳಿದುಕೊಳ್ಳಲು ನಮ್ಮ ಸಂಸ್ಥೆಯಿಂದ ನಾವು ಪ್ರಯತ್ನವನ್ನು ಮಾಡಿರುವುದಿಲ್ಲ.

12) ಮೇಲೆ ಹೇಳಿದಂತಹ ದ್ವಿಚಕ್ರ ವಾಹನಕ್ಕೆ ಅಪಘಾತದಲ್ಲಿ ಏನು ಏನು ಜಖಂಗಳು ಆಗಿದ್ದವು ಎಂಬ ವಿವರಗಳನ್ನು ಐಎಂವಿ ವರದಿಯಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಯಾವ ನಿಲುವುಗಳನ್ನು ತೆಗೆದುಕೊಂಡಿದ್ದೇನೋ ಆ ನಿಲುವುಗಳಿಗೆ ಪೂರಕವಾದಂತಹ ಯಾವುದೇ ದಾಖಲೆಗಳನ್ನು ನಾವು ಹಾಜರುಪಡಿಸಿಲ್ಲ ಎಂದರೆ ಸರಿ.

13) ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಸಲ್ಲಿಸಿರುವಂತಹ ಪ್ರಮಾಣ

ಪತ್ರದಲ್ಲಿ ನಾನು ಸುಳ್ಳು ಸಂಗತಿಗಳನ್ನು ಪ್ರತಿಪಾದನೆ ಮಾಡಿದ್ದೇನೆ ಎಂದರೆ ಸುಳ್ಳು. ಅಪಘಾತದ ಸಮಯದಲ್ಲಿ ವಿಮಾ ಪಾಲಿಸಿಯು ಜಾರಿಯಲ್ಲಿ ಇದ್ದರೂ ಸಹಾ ನಾವು ಹಣ ಕೊಡುವುದಕ್ಕೆ ಜವಾಬ್ದಾರರು ಆಗಿರುವುದಿಲ್ಲ ಎನ್ನುವ ಸಂಬಂಧವಾಗಿ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು.

14) ಅಪಘಾತವು ಆಗಿರುವ ವಿಷಯವು ನಮ್ಮ ಸಂಸ್ಥೆಗೆ ಮತ್ತು ನನಗೆ ಚನ್ನಾಗಿ ತಿಳಿದಿದೆ ಮತ್ತು ನಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.